## ಚಿತ್ತ ಕೆತ್ತಿದ ಚಿತ್ರ

# ಉದಕ ಮಾವಯ್ಯ

### ಎಚ್. ಎಲ್. ನಾಗೇಗೌಡರು ಸೃಷ್ಟಿಸಿದ 'ಉದಕ ಮಾವಯ್ಯ' ಪಾತ್ರದ ನೆನಪುಗಳು



**ಪದ್ಮಾ ಶ್ರೀರಾಮ**

ಕಲೆ: ಮುರಳೀಧರ್ ರಾಥೋಡ್

ಕಥಾಸಮುದ್ರ ಗರ್ಭದಲ್ಲಿ ಅದೆಷ್ಟು ಕಥಾನಕಗಳು ಹುದುಗಿರುವವೊ, ನೆನಪಿನಾಳದಿಂದ ಒಮ್ಮೊಮ್ಮೆ ಕಥಾಪಾತ್ರಗಳು ನಾವಿದ್ದೇವೆ ಎಂದು ಎದ್ದುಬಂದು ನಮ್ಮ ಸ್ಮೃತಿಪಟಲದ ಮುಂದೆ ನಿಲ್ಲುತ್ತವೆ. ಹೀಗೆ ಆಗೀಗ ಬರುವವನು ಉದಕ ಮಾವಯ್ಯ.

ಉದಕ ಎಂದರೆ ನೀರು ಎನ್ನುವುದು ಸಾಮಾನ್ಯ ಅರ್ಥ. ಆದರೆ ನಮ್ಮ ಗ್ರಾಮೀಣ ಪರಿಭಾಷೆಯಲ್ಲಿ 'ಉದಕ' ಎಂದರೆ ಸಾರು. ನಮ್ಮ ಚಿಕ್ಕಪ್ಪ ಒಬ್ಬರು ಮಧ್ಯಾಹ್ನ ಮನೆಗೆ ಊಟಕ್ಕೆ ಬರುತ್ತಿದ್ದಂತೆ ಇವತ್ತೇನು 'ಉತ್ಕ' ಎಂದು ಹೆಂಡತಿಯನ್ನು ವಿಚಾರಿಸುತ್ತಿದ್ದರು. ಆದ್ದರಿಂದ ಉದಕ ಎಂದರೆ ನೀರು ಮಾತ್ರವಲ್ಲ 'ಸಾರೂ' ಹೌದು.

ಸರ್ಕಾರದ ಉನ್ನತ ಅಧಿಕಾರಿಯಾಗಿದ್ದರೂ ಸಾಹಿತ್ಯದ ಬಗೆಗಿನ ಅಪಾರ ಒಲವಿನಿಂದ ಕಥೆ, ಕಾದಂಬರಿ, ವ್ಯಕ್ತಿಚಿತ್ರ, ಅನುವಾದ, ಜಾನಪದ ಸಾಹಿತ್ಯ ಇವುಗಳ ಕೃಷಿಯನ್ನು ಸಮರ್ಥವಾಗಿ ಮಾಡಿದ ಎಚ್.ಎಲ್.ನಾಗೇಗೌಡರು ಸೃಷ್ಟಿಸಿದ ಒಂದು ವ್ಯಕ್ತಿ ಚಿತ್ರಣವೇ 'ಉದಕ ಮಾವಯ್ಯ'. ಉದಕ ಮಾವಯ್ಯನಿಗೆ ಸಾರು, ಬರಿ ಸಾರು ಮಾತ್ರವಾಗಿರದೆ ಅದು ಬಾಡಿನ ಚೂರುಗಳಿಂದ ಶೋಭಿತವಾಗಿರಬೇಕಿತ್ತು.

ಹೊಟ್ಟೆಬಾಕತನ ಸಾಮಾನ್ಯವಾಗಿ ಜನರಲ್ಲಿ ಕಂಡುಬರುವ ಒಂದು ಸ್ವಭಾವ. ಇದನ್ನು ಸೂಕ್ಷ್ಮಗ್ರಹಣ ಶಕ್ತಿಯ ಲೇಖಕರು ಸ್ವಾರಸ್ಯಕರವಾಗಿ ದಾಖಲಿಸುತ್ತಾರೆ. ಕುವೆಂಪುರವರ 'ಕಾನೂರು ಹೆಗ್ಗಡತಿ' ಕಾದಂಬರಿಯಲ್ಲಿ ಬಾಡುಗಳ್ಳ ಸೋಮ, ಹೂವಯ್ಯನ ಹೋತವನ್ನು ಕದ್ದು ತಂದರೆ ಹೋತದ ಅರ್ಧಪಾಲು ಮಾಂಸ ತನಗೆ ದಕ್ಕುತ್ತದೆ ಎಂಬ ಪ್ರಲೋಭನೆಗೆ ಒಳಗಾಗಿ, ಅರ್ಧರಾತ್ರಿಯಲ್ಲಿ ಹೋತವನ್ನು ಕದಿಯಲು ಪ್ರಯತ್ನಿಸಿ ಗೊಬ್ಬರದ ಗುಂಡಿಗೆ ಬಿದ್ದು ಗೋಳಾಡುತ್ತಾನೆ. ಆದರೆ ನಮ್ಮ ಉದಕ ಮಾವಯ್ಯ ಅಂಥ ಕೆಟ್ಟ ಧೈರ್ಯದ ಸಾಹಸ ಮಾಡುವುದಿಲ್ಲ. ಬದಲಾಗಿ ತನ್ನ ಸುಲಿಪಲ್ಲ ನಗೆ ಬೀರುತ್ತ, ಜಾಣ ಮಾತುಗಾರಿಕೆಯಿಂದ ಎಲ್ಲ ಬಾಂಧವರ ಮನೆಯಲ್ಲಿ ಮಾಂಸದೂಟದ ರುಚಿಯನ್ನು ಅನುಭವಿಸುವ ರಸಿಕನಾಗಿರುತ್ತಾನೆ. ಇಂತಹವನೊಬ್ಬ ಹಳ್ಳಿಯಲ್ಲಿದ್ದರೆ ಆಗೀಗ ಟೀಕೆಗೆ ಗುರಿಯಾದರೂ ಊರಿನವರಿಗೆಲ್ಲಾ ಉದಕ ಮಾವಯ್ಯನಾಗಿ, ಓದುಗರ ಮನದ ಮೂಲೆಯಲ್ಲಿ ನಿಲ್ಲುತ್ತಾನೆ.

ಉದಕ ಮಾವಯ್ಯ ಅಂದಿನ ಕಾಲಕ್ಕೆ ತಕ್ಕ ಇರಿಸರಿಕೆಯ ರಸಿಕನೂ ಆಗಿದ್ದ. ಮೊದಲು ಅಂದಿನ ಗ್ರಾಮೀಣ ಸಂಪ್ರದಾಯದಂತೆ ತಲೆಯಲ್ಲಿ ಬೆಳೆದಿರುವ ಜುಟ್ಟನ್ನು ಹೆಂಡತಿ ಕೈಲಿ ಬಾಚಿಸಿ, ಚೆಂಡು ಹೂ ಮುಡಿಯುತ್ತಿದ್ದ. ಅದರಿಂದ ಅವನಿಗಿದ್ದ ಅಡ್ಡ ಹೆಸರು ಚೆಂಡೂರ. ನಂತರ ಕೂದಲಿಗೆ ಬಾದಾಮಿ ಕಟ್ ಮಾಡಿಸಿದ! ಮಾಮೂಲಿ ಜೋಡಿನ ಬದಲು ಗಿರ್ಕಿ ಜೋಡು ಮೆಟ್ಟಲಾರಂಭಿಸಿದ. ಜೋಡಿನ 'ರ್‍ರ್ರ್ ರ್‍ರ್ರ್' ಶಬ್ದ ಕೇಳಿದವರು ಮಾತಾಡಿಸಿಯೇ ತೀರುತ್ತಾರೆ ಎನ್ನುವುದು ಮಾವಯ್ಯನ ನಂಬಿಕೆ. ಜೋಡಿನ ಶಬ್ದ ಕೇಳಿದವರು, 'ಎಲ್ಲಿಗೆ ಮಾವಯ್ಯ ಸವಾರಿ?' ಎಂದರೆ 'ಇಲ್ಲೇ ಕೊಳೆಸಂದ್ರಕ್ಕೆ ಕಣೊ' ಅನ್ನುತ್ತಿದ್ದ. ಅಲ್ಲಿ ಕನ್ನಂಬಾಡಿ ಹಬ್ಬದ ನಿಮಿತ್ತ ಕುರಿ ಕುಯ್ದಿರುತ್ತಾರೆ. ಹೋದರೆ ಒಂದು ಸಟ್ಟುಗ ಮಾಂಸಕ್ಕೇನೂ